ತೆಗೆದುಕೊಂಡು ಹೋಗುತ್ತಾರೆ. ಕಾಳು ಕೊಳ್ಳುವ ಶೆಟ್ಟಿಗೆ ಹೇಳಿ ಬಂದೆ. ಆತನ ಕಡೆಯವರು ಬಂದು ಚೀಲಕ್ಕೆ ತುಂಬುತ್ತಾರೆ. ನಾನು ಚೀಲಗಳನ್ನು ನೋಡುತ್ತಿರುತ್ತೇನೆ. ಖಾಲಿ ಚೀಲಗಳನ್ನೇ ಎತ್ತಲಾಗದ ನಾನು ತುಂಬಿದ ಚೀಲಗಳನ್ನು ಎತ್ತಲು ಹೋಗುತ್ತೇನೆ. ಶೆಟ್ಟಿ ಕಾಳುಗಳನ್ನು ತೆಗೆದುಕೊಂಡು ಹೋಗಿರುವುದರಿಂದ ಅವನು ಕೊಟ್ಟಿದ್ದನ್ನು ಪಡೆಯಬೇಕು.

ನನ್ನ ಜೀವನ ಕಾಳುಗಳ ಜೊತೆ ಸಾಗಿದೆ. ಕಾಳುಗಳಿಂದಲೇ ನಾನು ಮೋಸ ಹೋದೆ. ಕಾಳುಗಳಿಂದಲೇ ನಾನು ಕೆಳಗಿಳಿದೆ. ಕಾಳಿನ ರಾಶಿ ಮೇಲೆ ಮಲಗಿ ಕಾಳು ಕುಕ್ಕುತ್ತಿದ್ದ ಹಕ್ಕಿಗಳು ತಪ್ಪಿಸಿಕೊಂಡು ಹಾರಾಡುವುದನ್ನು ನೋಡಿದೆ. ಅವಕ್ಕೆ ಬೆಳಕು ಮತ್ತು ಕಾಳು ಎಂದರೆ ಬಹಳ ಇಷ್ಟ. ಅವೆರಡೇ ಅವಕೆ ಗೊತ್ತಿರುವುದು. ನನಗೆ ಗೊತ್ತಿರುವುದು ಹೊಲ ಮತ್ತು ಕಾಳು. ಕಾಳುಗಳನ್ನು ಹಿಡಿಯಲ್ಲಿ ತೆಗೆದುಕೊಂಡು ಮತ್ತೆ ಕಾಳಿನ ರಾಶಿಗೆ ಸುರಿದೆ. ಕಾಳೊಳಗೆ ಹೊಲ, ಹೊಲದೊಳಗೆ ಕಾಳು ಗೂಡು ಕಟ್ಟಿರುವುದು ಕಾಣಿಸಿತು. ಕಳೆಗಳು ಇವೆರಡಕ್ಕೂ ಕಳೆ ತಂದಿದ್ದವು. ಕಳೆಗಳನ್ನು ತುಳಿದುಕೊಂಡೇ ನಾನು ತೆನೆಗಳ ಮೂಟೆ ಹೊತ್ತು ಹೊಲದಲ್ಲೆಲ್ಲ ಓಡಾಡಿದೆ.

* * *

## ಸಂಜೆ

ಸತ್ತಂತಿರುವ ದ್ವೇಷ ಅಸೂಯೆಗಳು ಜೀವಂತವಾಗಿವೆ. ಅವು ಕೈ ಕಾಲು ಅಲುಗಿಸುತ್ತಿಲ್ಲ. ಹಾಗೇ ನೋಡುತ್ತಿದ್ದರೆ ಗೊತ್ತಾಗುತ್ತದೆ. ಅವುಗಳ ಕೆನ್ನೆ ಮೇಲೆ ಒಂದೆರಡು ಹನಿ ಬಿದ್ದರೆ ಅಲುಗಾಡಬಹುದು. ಕಿವಿಯ ಬಳಿ ಏನಾದರೂ ಪಿಸುಗುಟ್ಟಿದರೆ ಅಲುಗಾಡಬಹುದು. ಮುಟ್ಟಿದರೆ ಅಲುಗಾಡಬಹುದು. ಅಲ್ಲಾಡಿಸಿದರೆ ಅಲುಗಾಡಬಹುದು. ಸತ್ತೇ ಹೋದವೇನೋ ಎಂದುಕೊಂಡಿದ್ದೆ. ಹೂತೇ ಬಿಟ್ಟರೇನೋ ಎಂದುಕೊಂಡಿದ್ದೆ. ಸುಟ್ಟೇ ಬಿಟ್ಟರೇನೋ ಎಂದುಕೊಂಡಿದ್ದೆ. ಯಾವುದೋ ಪ್ರಾಣಿಗಳು ಕೆದಕಿ ತೋಡಿ ಬಿಟ್ಟವೆ. ಯಾರೋ ಬೆಂಕಿಗೆ ನೀರು ಸುರಿದಿದ್ದಾರೆ. ಪ್ರಾಣಿಗಳು ಯಾವಾಗಲೂ ಕಾಣುವುದಿಲ್ಲ. ಒಂದು ಹೊತ್ತಿನಲ್ಲಿ ಎದ್ದು ಬೆಟ್ಟಗಳಿಂದ ಈಚೆ ಬರುತ್ತವೆ. ಅವು ಗುಂಡಿಗಳನ್ನು ಕೆದಕಿ ಹೆಣಗಳನ್ನು ಈಚೆ ತೆಗೆದ ಮೇಲೆ ಇದಕ್ಕಾಗಿ ಕಾದು ಕೂತಿದ್ದವರು ಹೆಣಗಳ ಒಡವೆ ಬಿಚ್ಚಿಕೊಂಡರೆ? ಊರೊಳಗೆ ಮತ್ತೆ ಅಡವಿಟ್ಟರೆ? ಅಡವಿ ಸೇರಿದ ಒಡವೆಗಳು ಮತ್ತೆ ಅಡವಿಡಿಸಿಕೊಂಡವೆ? ಹೆಣದ ಒಡವೆ ಧರಿಸಿದವರೆಲ್ಲ ಹೆಣದಂತೆ ಓಡಾಡುತ್ತಿದ್ದಾರೆ. ಆದ್ದರಿಂದ ಇವರಿಗೆ ಬದುಕಿನ ಮಹಿಮೆ ತಿಳಿಯುತ್ತಿಲ್ಲ.

* * *

## ಕಾಗದದ ದೋಣಿ

ದಡದಲ್ಲಿ ನನ್ನಂತೆ ಇನ್ನೂ ಕೆಲವರು ದೋಣಿಗಾಗಿ ಕಾದು ಕುಳಿತಿದ್ದರು. ಮೆಟ್ಟಿಲುಗಳನ್ನು ಹಿಡಿದುಕೊಂಡು ಮಾತಿನಲ್ಲಿ ಮುಳುಗಿದ್ದರು. ಕಡಲೆ ಬೀಜ, ಬಟಾಣಿ, ಪುರಿ ತಿಂದಾದ ಮೇಲೆ ಖಾಲಿಯಾದ ಕಾಗದದ ಪೊಟ್ಟಣಗಳನ್ನು ಎಸೆಯುತ್ತಿದ್ದರು.

ಎಲ್ಲರ ಗಮನವೂ ಆ ಕಡೆಯಿಂದ ಬರಬೇಕಾಗಿದ್ದ ದೋಣಿಗಳೆಡೆಗೇ ಇತ್ತು. ಮಕ್ಕಳಂತೂ ದೋಣಿಗಳನ್ನೇ ನೆನೆಯುತ್ತಿದ್ದರು. ಎಷ್ಟು ಹೊತ್ತಿಗೆ ನಮ್ಮ ಕೈಗಳನ್ನು ನದಿಯಲ್ಲಿ ಅದ್ದಿ ನೆನೆಸುತ್ತೇವೋ ಎಂದುಕೊಳ್ಳುತ್ತಿದ್ದರು. ತಿಂದೆಸೆದ ಖಾಲಿ ಕಾಗದಗಳನ್ನು ಆರಿಸಿಕೊಂಡು ದೋಣಿಗಳನ್ನು ಮಾಡಿದೆ. ಎಲ್ಲವನ್ನು ನೀರಿನಲ್ಲಿ ತೇಲಿ ಬಿಡುತ್ತಿದ್ದೆ. ಅಷ್ಟು ಹೊತ್ತಿಗೆ ದೂರದಲಿ ಅಲಂಕಾರ ಮಾಡಿಕೊಂಡು ಧ್ವನಿವರ್ಧಕದಿಂದ ಹಾಡು ಹೇಳಿಕೊಂಡು ಬರುತ್ತಿದ್ದ ದೋಣಿಗಳು ಕಾಣಿಸಿಕೊಳ್ಳತೊಡಗಿದವು. ದೊಡ್ಡವರೆಲ್ಲ ತಮ್ಮ ತಮ್ಮ ಮಕ್ಕಳಿಗೆ ಅಗೋ ಬಂದವು, ನೋಡಿ, ಏಳಿ ಏಳಿ, ಎಷ್ಟು ಚೆನ್ನಾಗಿ ಅಲಂಕಾರ ಮಾಡಿಕೊಂಡು ಬರುತ್ತಿವೆ ಎಂದು ಹೇಳತೊಡಗಿದರು.

ಯಾವ ಮಕ್ಕಳೂ ಅತ್ತ ತಿರುಗಿ ನೋಡಲಿಲ್ಲ. ಅವರೆಲ್ಲರೂ ನನ್ನ ಕಾಗದದ ದೋಣಿಗಳನ್ನೇ ನೋಡುತ್ತ ಮೈಮರೆತು ಬಿಟ್ಟಿದ್ದರು. ಏಕೆ ಮಕ್ಕಳೇ, ನೀವು ನಿಜವಾದ ದೋಣಿಗಳನ್ನು ನೋಡುತ್ತಿಲ್ಲ? ಕಾಗದದ ದೋಣಿಗಳಲ್ಲಿ ಅಂಥದ್ದೇನು ನೋಡಿದಿರಿ? ಎಂದು ನಾನು ಕೇಳಿದೆ.

ನಿಜವಾದ ದೋಣಿಗಳು ಒಂದೇ ದಿಕ್ಕಿನಲ್ಲಿ ಚಲಿಸುತ್ತಿವೆ. ಮತ್ತು ಅವನ್ನು ನಡೆಸುವವರಿದ್ದಾರೆ. ಕಾಗದದ ದೋಣಿಗಳಿಗೆ ಹೀಗೇ ಹೋಗಬೇಕೆಂದಿಲ್ಲ. ಅವು ಹೇಗೆ ಬೇಕೋ ಹಾಗೆ ಚಲಿಸುತ್ತಿವೆ. ಅವನ್ನು ಯಾರೂ ನಡೆಸುತ್ತಿಲ್ಲ... ಎಂದು ಮಕ್ಕಳು ಹೇಳುತ್ತಿದ್ದರು. ●